®

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU
CITY UNIVERSITY

Central College Campus, Dr. AmbedkarVeedhi, Bengaluru,
E-mail ID: registrarevlubcu@gmail.com, Ph.No: 080-22295559

ಸಂಖ್ಯೆ: ಬೆಂ.ನ.ವಿ/ಪ.ವಿ/NEP/2022-23 ದಿನಾಂಕ : 19.01.2023

# ಸುತ್ತೋಲೆ

**ವಿಷಯ: ವಿದ್ಯಾರ್ಥಿಗಳ ಹಾಜರಾತಿ, ಆಂತರಿಕ ಅಂಕಗಳು, ಪ್ರಾಯೋಗಿಕ ಪರೀಕ್ಷಾ ಅಂಕಗಳು, ಇತ್ಯಾದಿ ವಿವರಗಳನ್ನು ಕಾಲೇಜಿನ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡುವ ಬಗ್ಗೆ.**

**ಉಲ್ಲೇಖ: ವಿಶ್ವವಿದ್ಯಾನಿಲಯ ಸುತ್ತೋಲೆ ದಿನಾಂಕ : 28.12.2022**

*****

ಪ್ರಥಮ ಸೆಮಿಸ್ಟರ್ N.E.P ವಿದ್ಯಾರ್ಥಿಗಳ ಹಾಜರಾತಿ, ಆಂತರಿಕ ಅಂಕಗಳು, ಪ್ರಾಯೋಗಿಕ ಅಂಕಗಳನ್ನು ಕೆಲವು ಪ್ರಾಂಶುಪಾಲರುಗಳು ಕಾಲೇಜು ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡದ ಕಾರಣ ಮತ್ತು ಸರಿಯಾಗಿ ಪರಿಶೀಲಿಸಿ ಅಪ್ಲೋಡ್ ಮಾಡದ ಕಾರಣದಿಂದ ಕೆಲವು ಕಾಲೇಜುಗಳ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲು ತೊಂದರೆಯಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಫಲಿತಾಂಶ ವಿಳಂಬವಾಗಿ ಪ್ರಕಟಿಸಬೇಕಾದ ಅನಿವಾರ್ಯತೆಯಿಂದ, ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಪೋಷಕರಿಗೆ ಉತ್ತರ ಹೇಳಲು ಕಷ್ಟದ ಪರಿಸ್ಥಿತಿ ಉದ್ಭವವಾಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ.

**ಎರಡನೇ ಸೆಮಿಸ್ಟರ್** N.E.P ಪರೀಕ್ಷೆಗಳ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದ್ದು, ಫಲಿತಾಂಶ ಪ್ರಕಟಿಸಲು ಅನುಕೂಲವಾಗುವಂತೆ, ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ವಿದ್ಯಾರ್ಥಿಗಳ ಹಾಜರಾತಿ, ಆಂತರಿಕ ಅಂಕಗಳು, ಪ್ರಾಯೋಗಿಕ ಪರೀಕ್ಷಾ ಅಂಕಗಳನ್ನು ಸೂಕ್ತವಾಗಿ ಪರಿಶೀಲಿಸಿ, ಸರಿಯಾಗಿರುವುದರ ಬಗ್ಗೆ ದೃಢಪಡಿಸಿಕೊಂಡು ನಂತರ ಕಾಲೇಜಿನ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಈ ಮೂಲಕ ತಿಳಿಸಲಾಗಿತ್ತು. ಕೆಲವು ಕಾಲೇಜುಗಳ ಪ್ರಾಂಶುಪಾಲರುಗಳು ವಿಶ್ವವಿದ್ಯಾಲಯದ ನಿರ್ದೇಶನವನ್ನು ಅನುಸರಿಸಿರುತ್ತಾರೆ ಹಾಗೂ ಇನ್ನೂ ಕೆಲವು ಕಾಲೇಜುಗಳು ಅಪ್ಲೋಡ್ ಮಾಡಿರುವ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ. ಯಾವ ಕಾಲೇಜಿನ ಪ್ರಾಂಶುಪಾಲರುಗಳು ಈಗಾಗಲೇ ಹಾಜರಾತಿಯನ್ನು UUCMS ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡದೇ ಮ್ಯಾನ್ಯುಯಲ್ ಆಗಿ ಸಲ್ಲಿಸಿರುತ್ತಾರೋ, ಅಂತಹ ಕಾಲೇಜಿನವರು ಮತ್ತೊಮ್ಮೆ UUCMS ಪೋರ್ಟಲ್‌ನಲ್ಲಿ ಹಾಜರಾತಿಯನ್ನು ಅಪ್ಲೋಡ್ ಮಾಡುವಂತೆ ತಿಳಿಸಲಾಗಿದೆ. ಒಂದು ವೇಳೆ ಈ ಕಾರ್ಯ ಮಾಡಲು ವಿಫಲವಾಗಿ, ಫಲಿತಾಂಶ ಪ್ರಕಟಣೆ ವಿಳಂಬವಾದರೆ ಆಯಾ ಕಾಲೇಜುಗಳ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆಂದು ತಿಳಿಸುತ್ತಾ ಮುಂದಿನ ತೊಂದರೆಗಳಿಗೆ ಪ್ರಾಂಶುಪಾಲರು ಜವಾಬ್ದಾರರಾಗುತ್ತಾರೆ.

**ಕುಲಸಚಿವರು (ಮೌಲ್ಯಮಾಪನ)**

**ಗೆ,**

1. ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ ಬೆಂಗಳೂರು.
2. ಕುಲಪತಿಯವರು/ಕುಲಸಚಿವರು (ಆ)/ ಕುಲಸಚಿವರು (ಮೌ)/ ಹಣಕಾಸು ಅಧಿಕಾರಿಗಳ ಆಪ್ತ ಶಾಖೆ, ಬೆಂ.ನ.ವಿ. ಬೆಂಗಳೂರು.
3. ವಿಶ್ವವಿದ್ಯಾಲಯ ವೆಬ್ಸೈಟ್ ನಿರ್ವಾಹಕರು, ಬೆಂ.ವಿ.ಬೆಂ.
4. ಮುಖ್ಯ ಕಡತ.